



ಅರುಣ ಪಿ. ಭಟ್ಟ

## ವಾರಭವಿಷ್ಯ: 29.12.2022ರಿಂದ 04.01.2023ವರೆಗೆ



**ಮೇಷ**

ವಾರದ ಶುರುವಿನಲ್ಲಿ ನಿಮ್ಮ ಮುಖದ ಸೌಂದರ್ಯ ಹೆಚ್ಚಾಗಲಿದೆ. ಸಂತೋಷದ ಕಾರಣಕ್ಕೆ ಹೀಗಾಗಬಹುದು. ಉದ್ಯಮ ವ್ಯಾಪಾರ ನಡೆಸುತ್ತಿರುವವರಿಗೆ ಲಾಭವಿದೆ. ಹೊಸ ಉತ್ಸಾಹ ನಿಮ್ಮಲ್ಲಿ ಕಾಣಿಸಿಕೊಳ್ಳಲಿದೆ. ವಾರದ ಮಧ್ಯ ಭಾಗದಲ್ಲಿ ಜೀವನ ಮಟ್ಟದ ಸುಧಾರಣೆ ಬಗ್ಗೆ ಹೆಚ್ಚಿನ ಗಮನ ನೀಡಲಿದ್ದೀರಿ. ನಾನಾ ಬಗೆಯ ಸವಾಲುಗಳು ಎದುರಾಗಲಿವೆ. ಶುಭದಿನ 30. ಹನುಮಾನ್ ಚಾಲೀಸ್ ಪಠಿಸಿರಿ.



**ವೃಷಭ**

ಉದ್ಯೋಗ ಮತ್ತು ಸಂಘಟನೆಗೆ ಸಂಬಂಧಿಸಿದಂತೆ ಉತ್ತಮವಾದ ಪ್ರಗತಿ ಇದೆ. ವೈಯಕ್ತಿಕ ಸಂಬಂಧದಲ್ಲಿ ಸಂಗಾತಿ ಮೆಚ್ಚಿಸುವ ಸಲುವಾಗಿ ಉಡುಗೊರೆಗಳನ್ನು ನೀಡಲಿದ್ದೀರಿ. ಆದರೆ ನೀವು ಬಹಳ ನಂಬಿದ ವ್ಯಕ್ತಿಗಳು ವಿವಿಧ ವಿಚಾರಗಳಲ್ಲಿ ಸುಳ್ಳು ಹೇಳಿದ್ದಾರೆ ಎಂಬ ಸಂಗತಿ ನಿಮಗೆ ತಿಳಿದು ಬೇಸರವಾಗುತ್ತದೆ. ನಿಮ್ಮ ಮನಸಿನ ವಿಚಾರಗಳನ್ನು ನೇರವಾಗಿ ಹೇಳಿಕೊಳ್ಳಲಿದ್ದೀರಿ. ಶುಭದಿನ 31. ಗಣೇಶ ಪಂಚರತ್ನ ಪಠಿಸಿರಿ.



**ಮಿಥುನ**

ವಾರದ ಆರಂಭದಲ್ಲಿ ವೃತ್ತಿ ಬದುಕಿನಲ್ಲಿ ಬೆಳವಣಿಗೆಗೆ ಅದ್ಭುತ ಅವಕಾಶಗಳಿವೆ. ನಿಮ್ಮ ಪರಿಶ್ರಮಕ್ಕೆ ಪ್ರತಿಫಲ ದೊರೆಯಲಿದೆ. ಇನ್ನು ಹಣಕಾಸು ಪರಿಸ್ಥಿತಿ ಉತ್ತಮಪಡಿಸಿಕೊಳ್ಳುವ ಅವಕಾಶ ನಿಚ್ಚಳವಾಗಿದೆ. ಈ ಹಿಂದಿಗಿಂತ ಖರ್ಚಿನ ಪ್ರಮಾಣ ಹೆಚ್ಚಿರುತ್ತದೆ. ಇದರಿಂದ ಮನಸಿಗೆ ಸ್ವಲ್ಪ ಬೇಸರವಾಗುತ್ತದೆ. ಆರೋಗ್ಯ ಸಮಸ್ಯೆ ಕಾಡಬಹುದು. ಶುಭದಿನ 01 ದಕ್ಷಿಣಾಮೂರ್ತಿ ಸ್ತೋತ್ರ ಪಠಿಸಿರಿ.



**ಕಟಕ**

ಉದ್ಯೋಗಸ್ಥರಿಗೆ ವಾರದ ಶುರುವಿನಲ್ಲಿ ಅನುಕೂಲವಿದೆ. ವೇತನ ಹೆಚ್ಚಳದ ಸಾಧ್ಯತೆ ಇದೆ. ವೈಯಕ್ತಿಕ ಸಂಬಂಧದಲ್ಲಿ ಕಹಿ ಅನುಭವಗಳಾಗಿ, ಮನಸಿಗೆ ಬೇಸರವಾಗಲಿದೆ. ಇಂಥ ಸನ್ನಿವೇಶದಲ್ಲಿ ವಾಗ್ವಾದ ಮಾಡದೆ ವಾಸ್ತವವನ್ನು ವಿವರಿಸಿ. ಆರೋಗ್ಯಕ್ಕೆ ಸಂಬಂಧಿಸಿದಂತೆ ಅನುಕೂಲಕರ ಸಮಯ ಇದು. ಹಣಕಾಸು ವಿಚಾರದಲ್ಲಿ ವಿಶೇಷವಾದ ಪ್ರಗತಿ ಇಲ್ಲ. ಶುಭದಿನ 29. ಗಣಪತಿಗೆ ದೂರ್ವಾರ್ಚನೆ ಮಾಡಿರಿ.



**ಸಿಂಹ**

ಕೆಲಸವನ್ನು ನಿಗದಿತ ಸಮಯದಲ್ಲಿ ಪೂರ್ಣಗೊಳಿಸುವ ಒತ್ತಡ ಇದ್ದೇ ಇರುತ್ತದೆ. ನಿಮ್ಮ ಪರಿಶ್ರಮದಿಂದ ಮಾತ್ರ ಭವಿಷ್ಯದಲ್ಲಿ ಅನುಕೂಲ ನಿರೀಕ್ಷಿಸಲು ಸಾಧ್ಯ. ಕೆಲವು ಕಾನೂನು ತೊಡಕುಗಳನ್ನು ಎದುರಿಸಬೇಕಾಗುತ್ತದೆ. ಆರೋಗ್ಯದ ವಿಚಾರಕ್ಕೆ ಇದು ಉತ್ತಮ ಸಮಯ ಅಲ್ಲ. ಇದರಿಂದ ಚಿಂತೆ ಹೆಚ್ಚಾಗಲಿದೆ. ದೂರದ ಪ್ರಯಾಣ ಮಾಡಲು ನಿರ್ಧಾರ ಮಾಡುತ್ತೀರಿ. ಶುಭದಿನ 02. ಕಾಲಭೈರವನ ಸೇವೆ ಮಾಡಿರಿ.



**ಕನ್ಯಾ**

ನಿಮ್ಮ ಶ್ರಮಕ್ಕೆ ಅದ್ಭುತವಾದ ಅನುಕೂಲಗಳು ದೊರೆಯಲಿವೆ. ಪೋಷಕರ ಜೊತೆ ಸಮಯ ಕಳೆಯಲು ಸಾಧ್ಯವಾಗದೆ ಕೆಲವು ಸಮಸ್ಯೆಗಳು ತಲೆದೋರಲಿವೆ. ವಾರದ ಮಧ್ಯ ಭಾಗದ ತನಕ ಆರೋಗ್ಯ ಉತ್ತಮವಾಗಿರುತ್ತದೆ. ಉದ್ಯೋಗ ಬದಲಾವಣೆಗೆ ಯತ್ನಿಸುತ್ತಿರುವವರು ಇನ್ನೂ ಹೆಚ್ಚಿನ ಶ್ರಮ ಹಾಕಬೇಕು. ವಾರದ ದ್ವಿತೀಯಾರ್ಧದಲ್ಲಿ ವ್ಯಾಪಾರದಲ್ಲಿ ಲಾಭ ಇದೆ. ಶುಭದಿನ 02. ಸೌಂದರ್ಯ ಲಹರಿ ಪಠಿಸಿರಿ.



**ತುಲಾ**

ಮನೆಗೆ ಅಗತ್ಯ ಇರುವ ವಸ್ತುಗಳನ್ನು ಖರೀದಿ ಮಾಡುವ ಬಗ್ಗೆ ಹೆಚ್ಚಿನ ಮುತುವರ್ಜಿ ವಹಿಸುತ್ತೀರಿ. ನೀವು ಹಾಕಿದ ಶ್ರಮಕ್ಕೆ ಯಶಸ್ಸು ಸಿಗಲಿದೆ. ಉದ್ಯೋಗ ವೃತ್ತಿ ಜೀವನದಲ್ಲಿ ನಿರೀಕ್ಷಿತ ಯಶಸ್ಸು ದೊರೆಯಲಿದೆ. ಆ ಮೂಲಕ ನಿಮ್ಮ ಕನಸನ್ನು ಈಡೇರಿಸಿಕೊಳ್ಳಲಿದ್ದೀರಿ. ಇದೇ ಮೊದಲಿಗೆ ಎಂಬಂತೆ ಉದ್ಯೋಗಕ್ಕೆ ಪ್ರಯತ್ನಿಸುತ್ತಿರುವವರು ಹೆಚ್ಚಿನ ಪರಿಶ್ರಮ ಹಾಕಬೇಕಾಗುತ್ತದೆ. ಶುಭದಿನ 01. ಲಿಂಗಾಷ್ಟಕ ಪಠಿಸಿರಿ.



**ವೃಶ್ಚಿಕ**

ಹೆಚ್ಚುವರಿ ಆದಾಯ ಆಗದೆ ಬೇಸರಪಡುತ್ತೀರಿ. ಈ ವಿಚಾರದಲ್ಲಿ ನಿಮ್ಮ ವಿವೇಚನೆಯನ್ನು ಸರಿಯಾದ ರೀತಿಯಲ್ಲಿ ಬಳಸಿ. ಈ ಅವಧಿಯಲ್ಲಿ ಆದಾಯಕ್ಕಿಂತ ಖರ್ಚು ಹೆಚ್ಚಾಗುತ್ತಿದೆಯಲ್ಲಾ ಎಂಬ ಚಿಂತೆ ಕಾಡುತ್ತದೆ. ಇನ್ನು ಗೆಳೆಯ ಗೆಳತಿಯರ ಜತೆಗೆ ಒತ್ತಡದ ಸನ್ನಿವೇಶವನ್ನು ಎದುರಿಸುತ್ತೀರಿ. ಆರೋಗ್ಯ ಸಮಸ್ಯೆಗೆ ಸೂಕ್ತ ಚಿಕಿತ್ಸೆಯನ್ನು ಪಡೆಯುವುದು ಉತ್ತಮ. ಶುಭದಿನ 30. ಚಂಡಿ ಪಾರಾಯಣ ಮಾಡಿರಿ.



**ಧನಸ್ಸು**

ಶೈಕ್ಷಣಿಕ ರಂಗದಲ್ಲಿ ಅದ್ಭುತವಾದ ಪ್ರಗತಿ ಇದೆ. ಸಂಗಾತಿ ಜತೆಗೆ ಬಾಂಧವ್ಯ ಇನ್ನಷ್ಟು ಗಟ್ಟಿಯಾಗಲಿದೆ. ಹಣಕಾಸು ವಿಚಾರದಲ್ಲಿ ನಿರೀಕ್ಷಿತವಾದ ಪ್ರಗತಿ ಆಗಲಿದೆ. ಕೆಲವರಿಗೆ ಖರ್ಚಿನಲ್ಲಿ ಅನಿರೀಕ್ಷಿತವಾದ ಹೆಚ್ಚಳ ಆಗಬಹುದು. ಹೀಗೆ ಆಗುವುದರಿಂದ ಸಮಸ್ಯೆಗಳು ಎದುರಾಗಲಿವೆ. ಹಣಕಾಸು ಹೂಡಿಕೆ ವ್ಯವಹಾರದಲ್ಲಿ ಉತ್ತಮವಾದ ಪ್ರಗತಿ ಇದೆ. ಶುಭದಿನ 31. ದತ್ತ ಗುರುಚರಿತ್ರೆ ಪಠಿಸಿರಿ.



**ಮಕರ**

ನಿಮಗೆ ಈಗಿರುವ ಗ್ರಹಗತಿಗಳನ್ನು ಗಮನಿಸಿದರೆ ಸಂಸ್ಥೆಯೊಂದರ ಜತೆಗೆ ದೀರ್ಘಾವಧಿ ಒಪ್ಪಂದಕ್ಕೆ ಬರುವ ಸಾಧ್ಯತೆಗಳಿವೆ. ಇನ್ನು ಉದ್ಯಮವನ್ನು ವಿಸ್ತರಿಸಲು ವಿಶಿಷ್ಟ ಅವಕಾಶಗಳು ದೊರೆಯಬಹುದು. ಸ್ಪರ್ಧಾತ್ಮಕ ಕ್ಷೇತ್ರದಲ್ಲಿ ಉತ್ತಮ ಪ್ರಗತಿ ಇದೆ. ವೈಯಕ್ತಿಕ ಸಂಬಂಧದಲ್ಲಿ ಭಿನ್ನಾಭಿಪ್ರಾಯಗಳು ಇದ್ದಲ್ಲಿ ಅವುಗಳನ್ನು ನಿವಾರಿಸಿಕೊಳ್ಳಲು ಸೂಕ್ತ ಸಮಯ ಇದು. ಶುಭದಿನ 03. ನವಗ್ರಹ ಆರಾಧನೆ ಮಾಡಿರಿ.



**ಕುಂಭ**

ವಾರದ ಶುರುವಿನಲ್ಲಿ ವರ್ಚಸ್ಸು ವೃದ್ಧಿಯಾಗಲಿದೆ. ಉದ್ಯೋಗ ಕ್ಷೇತ್ರದಲ್ಲಿ ಉತ್ತಮ ಪ್ರಗತಿ ಇದೆ. ಅಸ್ತವ್ಯಸ್ತವಾಗಿ ನಿಂತುಹೋಗಿದ್ದ ಕೆಲಸ–ಕಾರ್ಯಗಳನ್ನು ಕೈಗೆತ್ತಿಕೊಂಡು, ಗಡುವಿನೊಳಗೆ ಪೂರ್ಣಗೊಳಿಸಲಿದ್ದೀರಿ. ಕೌಟುಂಬಿಕ ಹಾಗೂ ಸಂಬಂಧದೊಳಗೆ ಸಮಸ್ಯೆಗಳು ಹೆಚ್ಚಾಗಲಿವೆ. ಸೋದರ ಸೋದರಿ ಜತೆಗಿನ ಬಾಂಧವ್ಯ ಗಟ್ಟಿಯಾಗಲಿದೆ. ಶುಭದಿನ 02. ವಿಷ್ಣು ಸಹಸ್ರನಾಮ ಮಾಡಿರಿ.



**ಮೀನ**

ವಾರದ ಶುರುವಿನಲ್ಲಿ ಭೂಮಿ ಖರೀದಿಯಲ್ಲಿ ತೊಡಗುವ ಸಾಧ್ಯತೆ ಇದೆ. ಉದ್ಯೋಗ ವಿಚಾರವಾಗಿ ದೂರಪ್ರಯಾಣ ಮಾಡಬೇಕಾಗುತ್ತದೆ. ಇದರಿಂದ ಮಾನಸಿಕವಾಗಿ ಚಿಂತೆಗೆ ಗುರಿಯಾಗುತ್ತೀರಿ. ಈ ಅವಧಿಯಲ್ಲಿ ಆರೋಗ್ಯದಲ್ಲಿ ಸಮಸ್ಯೆ ಎದುರಾಗಬಹುದು. ನಿರೀಕ್ಷಿತ ಮಟ್ಟದ ಪ್ರಗತಿ ಆಗುವುದಿಲ್ಲ. ಸಂಗಾತಿ ಜತೆಗೆ ಮನಸ್ತಾಪ ಏರ್ಪಡಬಹುದು. ಶುಭದಿನ 29. ಶ್ರೀರಾಮರಕ್ಷಾ ಸ್ತೋತ್ರ ಪಠಿಸಿರಿ.